ಬಿದಿರಿನ ಗಳಗಳನ್ನು ನಿಲ್ಲಿಸಿ, ಮೇಲೆ ದಟ್ಟವಾಗಿ ಬಾಳೆ ಎಲೆಗಳನ್ನು ಹೊದೆಸಿ ಹಂದರವನ್ನು ಹಾಕಲಾಗಿತ್ತು. ಆ ಹಂದರಕ್ಕೆ ಆಧಾರವಾಗಿದ್ದ ಆ ನಾಕೂ ಗಳಗಳಿಗೆ ಬಾಳೆ ಕಂಬಗಳನ್ನು ಕಟ್ಟಲಾಗಿತ್ತು. ಮೇಲೆ ಹಂದರದ ಸುತ್ತಲೂ ಬಣ್ಣಬಣ್ಣದ ಸಣ್ಣಸಣ್ಣ ಬಲ್ಬುಗಳ ಸರವನ್ನು ಹಾಕಲಾಗಿತ್ತು. ಆ ಬಲ್ಬುಗಳು ಕ್ಷಣ ಮಾತ್ರದಲ್ಲಿ ಹೊತ್ತಿ ಆರುತ್ತ ಬೀರುತ್ತಿದ್ದ ರಂಗು ರಂಗಿನ ಬೆಳಕಿನಲ್ಲಿ ಹಂದರವು ಝಗಮಗಿಸುತ್ತಿತ್ತು. ಕಾರ್ಯಕ್ರಮಕ್ಕೆ ಬರುತ್ತಿದ್ದ ಜನರು ಪ್ರವೇಶ ದ್ವಾರದಲ್ಲಿ ಹಾಕಲಾಗಿದ್ದ ಆ ಹಂದರದೊಳಗೆ ಹಾಯ್ದು ಮಠದೊಳಗೆ ಹೋಗುತ್ತಿದ್ದರು. ಅಲ್ಲಿ ಹಿಂದಿನ ಪೀಠಾಧಿಕಾರಿಗಳಾಗಿದ್ದ ಗಂಗಾಧರಯ್ಯಸ್ವಾಮಿಗಳ ಗದ್ದುಗೆಗೆ ಹಣೆಹಚ್ಚಿ ನಮಸ್ಕರಿಸಿ, ಹಣೆಗೆ ವಿಭೂತಿಯನ್ನು ಧರಿಸಿಕೊಂಡು ವೇದಿಕೆಯತ್ತ ಬರುತ್ತಿದ್ದರು. ಕಾರ್ಯಕ್ರಮಕ್ಕೆ ಇನ್ನೂ ಸಮಯವಿತ್ತಾದ್ದರಿಂದ ಜನರು ಹೆಚ್ಚೆಚ್ಚು ಸೇರುವ ನಿರೀಕ್ಷೆಯಿತ್ತು. ಇದೆಲ್ಲ ಆ ಹೊತ್ತಿನಲ್ಲಿ ಅದರ ಪಾಡಿಗೆ ಅದು ನಡೆದುಕೊಂಡು ಹೊಂಟಿತ್ತು.

ಇನ್ನೊಂದು ಕಡೆ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲೇಬೇಕೆಂದು ಹಟ ತೊಟ್ಟಂತ್ತಿದ್ದ, ಪಂಚಯ್ಯಸ್ವಾಮಿಗಳಿಗೆ ಪರಮಾಪ್ತನೂ ಹಾಗೂ ವಿರಕ್ತ ಮಠಕ್ಕೆ ಸಂಬಂಧಿಸಿದ ಹಣಕಾಸಿನ ವ್ಯವಹಾರದೊಂದಿಗೆ ಮಠದ ವತಿಯಿಂದ ನಡೆಯುತ್ತಿದ್ದ ಡಿಗ್ರಿ ಕಾಲೇಜು ಮತ್ತು ಹೆಣ್ಣುಮಕ್ಕಳ ಹಾಸ್ಟೇಲಿನ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊತ್ತಿದ್ದ ಮಳಲಿ ಭೀಮಪ್ಪನು ಮಠದ ಆವರಣದಲ್ಲಿ ಹುರುಪಿನಿಂದ ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಿದ್ದ. ಆತ ಆಗಾಗ ವೇದಿಕೆಯನ್ನು ಸಜ್ಜುಗೊಳಿಸುತ್ತಿದ್ದ ಹುಡುಗರಿಗೆ ಸಲಹೆ ಸೂಚನೆಗಳನ್ನು ಕೊಡುತ್ತಿದ್ದ. ಹಾಗೆಯೇ ಇದರ ನಡುನಡುವೆ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದ ಊರಿನ ಗಣ್ಯರನ್ನು ದೂರದಿಂದಲೇ ಗಮನಿಸಿದವನೇ ಅವರತ್ತ ದಡದಡನೆ ಹೋಗಿ, 'ಬರ್ರಿ, ಯಜಮಾನ್ರ ಬರ್ರಿ, ಈಗ ಬಂದ್ರೇನು...?' ಎನ್ನುತ್ತ ನಗುಮೊಗದಿಂದ ಮಾತನಾಡಿಸುತ್ತ, ಅವರನ್ನು ಕೈಹಿಡಿದು ಕರೆದೊಯ್ದು ವೇದಿಕೆಯ ಮುಂದೆ ಹಾಕಲಾಗಿದ್ದ ಕುರ್ಚಿಯ ಮೇಲೆ ಕುಳ್ಳಿರಿಸುತ್ತಿದ್ದ. ಹೀಗೆ, ಆತ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂಬ ಉಮ್ಮೇದಿಯಲ್ಲಿ ತನ್ನ ತಾನೇ ಮರೆತು ಹೋಗಿದ್ದ. ಆದರೂ ಆ ಹೊತ್ತಲ್ಲಿ ಆತನೊಳಗೆ ಯಾಕೇನೊ ಎಂಬಂತೆ ಆತಂಕ ಮನೆ ಮಾಡಿತ್ತು. ಅದಕ್ಕೆ ಕಾರಣವಿತ್ತು!

ಮಠದ ಆವರಣದಲ್ಲಿ ಈ ತೆರನಾಗಿ ಸಂಭ್ರಮ ಮನೆ ಮಾಡಿತ್ತಾದರೂ ಈ ಕಾರ್ಯಕ್ರಮದ ಕೇಂದ್ರಬಿಂದುವಾಗಿದ್ದ ಪಂಚಯ್ಯಸ್ವಾಮಿಗಳು ಮಾತ್ರ ಅಲ್ಲಿರಲಿಲ್ಲ! ಈಗ ನಾಕಾರು ದಿನಗಳ ಹೊತ್ತಾಯಿತು, ದಿಗಿಲಿಗೆ ಬಿದ್ದವರಂಗೆ ಮಾಡುತ್ತಿದ್ದ ಅವರ ಮನಸ್ಸಿಗೆ ಯಾದಕ್ಯಾದಕೊ ಸಮಾಧಾನವೇ ಇಲ್ಲದಂತಾಗಿತ್ತು. ಇದರಿಂದಾಗಿ, ಈ ಸಂಜೆ ನಡೆಯಲಿರುವ ಕಾರ್ಯಕ್ರಮದ ಮೇಲಿನ ಆಸಕ್ತಿಯನ್ನೇ ಕಳೆದುಕೊಂಡಿದ್ದರು. ಒಂದು ರೀತಿಯಲ್ಲಿ ಖಬರುಗೇಡಿಯಂಗಾಗಿದ್ದ ಅವರು ಇಂದು ನಸುಕಿನಲ್ಲಿ ಎಂದಿಗಿಂತ ಬೇಗನೆ ಎದ್ದು, ನಿತ್ಯಕರ್ಮಗಳನ್ನು ಮುಗಿಸಿಕೊಂಡಿದ್ದರು. ಅದಾದಮೇಲೆ ಅವಸರದಲ್ಲಿ ಲಿಂಗಪೂಜೆ ಮಾಡಿಕೊಂಡು ಬಂದು, ತಮ್ಮ ವಿಶ್ರಾಂತಿ ಕೋಣೆಯನ್ನು ಹೊಕ್ಕು ಕದವನ್ನು ಹಾಕಿಕೊಂಡವರು ಇದುವರೆಗೂ ಹೊರಗೆ ಬಂದಿರಲಿಲ್ಲ. ಅಷ್ಟಕ್ಕೂ ಬೆಳಗಿನ ಉಪಹಾರವನ್ನೂ ಸೇವಿಸಿರದಿದ್ದ ಅವರಿಗೆ ಮಠದಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದ ಮಾಲಗಾರ ಸಂಗವ್ವ, ಮಧ್ಯಾಹ್ನ ವಿಶ್ರಾಂತಿ ಕೋಣೆಯ ಚಿಲಕ ಹಾಕದೆ ಮುಂದು ಮಾಡಿದ್ದ ಕದವನ್ನು ತೆರೆದು ಊಟವನ್ನಿಟ್ಟು ಬಂದಿದ್ದಳು. ಹಾಗೇ, ಮರಳಿ ಬರುವಾಗ, 'ಅಪ್ಪಗೋಳ, ಊಟ ಇಟ್ಟೇನಿ...' ಎಂದು ಅವರಿಗೆ ಹೇಳಿ ಬಂದಿದ್ದಳು. ಆದರೆ, ತಾಟಿನಲ್ಲಿ ಎರಡು ಬಿಳಿಜ್ವಾಳ ರೊಟ್ಟಿ ಮುರಿದಿಟ್ಟು, ಅದರೊಟ್ಟಿಗೆ ಬದನೆಕಾಯಿ ಪಲ್ಯ, ಚಿಕ್ಕ ಬಟ್ಟಲಲ್ಲಿ ಟಮಾಟಿ ಸಾರು, ಮೊಸರು, ಸೇಂಗಾ ಚಟ್ನಿ, ಉಳ್ಳೇಗಡ್ಡಿ- ಮೆಂತೆಪಲ್ಯ ಮತ್ತು ಚಮಚದಷ್ಟು ಅನ್ನವನ್ನು ಹಚ್ಚಿಕೊಂಡು ಬಂದು, ಟೀಪಾಯ್ ಮೇಲೆ ಆಕೆ ಇಟ್ಟು ಹೋಗಿದ್ದ ಊಟದಲ್ಲಿನ ಅನ್ನದ ಅಗುಳನ್ನು ಸಹ ಪಂಚಯ್ಯಸ್ವಾಮಿಗಳು ಮುಟ್ಟರಲಿಲ್ಲ! ಅಷ್ಟರ ಮಟ್ಟಿಗೆ ತಮ್ಮನ್ನು ತಾವೇ ಮರೆತವರಂಗೆ ಚಿಂತೆಯೊಳಗೆ ಮುಳುಗಿ ಹೋಗಿದ್ದರು. ಆ ಹೊತ್ತಿನಲ್ಲಿ ತಲೆಯೊಳಗೆ ಏನಕೇನರೆ ಯೋಚನೆಗಳು ಬಂದು ಅವರ ಮನಸ್ಸು ಇನ್ನಿಲ್ಲದಂಗೆ ತಳಮಳಿಸುತ್ತಿತ್ತು. ಆ ತಳಮಳವನ್ನು ಕಳೆಯಲೆಂಬಂತೆ ವಿಶ್ರಾಂತಿ ಕೋಣೆಯೊಳಗೆ ಅತ್ತಿಂದಿತ್ತ ಇತ್ತಿಂದತ್ತ ಹೆಜ್ಜೆ ಹಾಕುತ್ತಿದ್ದರು. ನಡುನಡುಕ ತಮ್ಮೊಳಗೇ ಏನೇನೋ